
ಪದಬಂಧ



ಎಡದಿಂದ ಬಲಕ್ಕೆ :

1. ಗೋಜಲೇನಿಲ್ಲ, ಇದು ' ಅತ್ಯಂತ ಪವಿತ್ರ ನೀರು 'ಎಂದೇ ಪ್ರಸಿದ್ಧ (4)
3. ವಾರಿಧಿಯ ಅತಿಕ್ರಮಣಕ್ಕೆ ಭಾರೀ ಪ್ರತಿಭಟನೆ (3)
4. ವಾರ್ತೆಯನ್ನೆಲ್ಲ ಕೇಳಿಸಿಕೊಂಡ ನಂತರ ಏಕಿಂಥ ನಡೆವಳಿಕೆ ? (3)
6. ಕವಡೆ ಸಂಗ್ರಹಿಸಿ ಹಣ ಗಳಿಸುವ ಕೆಲಸದ ಮೇಲೆ ನಿಯಂತ್ರಣ ಇದೆ (4)
7. ಬೆಂಕಿಯನ್ನಾರಿಸಲು ನೆರವು ನೀಡಿದ್ದು ಗಣಪತಿ ಹೌದೇ ? (3)
9. ಪುರಾಣಗಳನ್ನು ವಾಚಿಸುವವರ ಕಾಲಿನಲ್ಲಿ ಇದೇನು ಆಭರಣ ? (3)
11. ಗಣ್ಯರ ರಕ್ಷಣೆಗೆ ಖಡ್ಗವನ್ನು ಎದುರಿಸಬಲ್ಲ ಶಸ್ತ್ರ (3)
13. ಸಾಮಾನ್ಯರಾದರೇನು ? ಗೌರವದೊಡನೆ ತಲೆ ಬಾಗು (3)
15. ಭರತಪುರದಲ್ಲಿ ವಲಸೆ ಹಕ್ಕಿಗಳು ಬೇಕಾದಷ್ಟು, ವಿಪರೀತ (4)
17. ಸುಂದರವಾಗಿ ಮುದ್ರಿಸಿರುವ ಚಿತ್ರದಲ್ಲಿ ವಿಶಾಲ ಕಡಲು (3)
18. ಹೂ ಗಿಡಗಳ ರಾಶಿಯೇ ತುಂಬಿರುವ ಸಾಗರ ನೌಕೆ (3)
19. ತಣ್ಣಗೇನಿಲ್ಲ ಬಿಡಿ, ನಮ್ಮ ದೇಶದ್ದೇ ಇದೊಂದು ಹೊಸ ರಾಜ್ಯ (4)

ಮೇಲಿಂದ ಕೆಳಕ್ಕೆ :

1. ಶ್ರೀಗಂಧಕ್ಕೆ ಯಾವ ಸಂಬಂಧವೂ ಇಲ್ಲದ ಮೂಲ ವಸ್ತು (3)
2. ಉಣ್ಣಲು ಸಾಧ್ಯವೇ ಇಲ್ಲ ಬಿಡಿ, ಅಷ್ಟು ಉಪ್ಪು (3)
3. ವ್ಯಾಪಾರವನ್ನು ಕೈ ಬಿಟ್ಟು ಹೋಗಿದ್ದು ಕಾಡಿಗೇ ತಾನೇ ? (3)
5. ಪುಣ್ಯದ ಕೆಲಸಗಳನ್ನು ಕುರಿತೇ ಸದಾ ಸ್ಮರಣೆ (3)
7. ಗಾಬರಿಯೇನಿಲ್ಲ ಬಿಡಿ, ಭಾರೀ ಅಚ್ಚರಿ (3)
8. ಕಣ್ಣೀರು ಹರಿಸುತ್ತಿರುವವನ ಕೈಯಲ್ಲಿ ಗೋಡೆ ಕಟ್ಟುವ ಸಾಧನ (3)
9. ನ್ಯೂನತೆಯನ್ನೆಲ್ಲ ನಿರ್ಮೂಲನಗೊಳಿಸಿದ ಮೇಲೆ ಪೂರ್ಣ ಹೊಸದು (3)
10. ಕಷ್ಟ ಮರೆಸಲು ಮೊದಲು ಸಮಾಧಾನಗೊಳಿಸು (3)
12. ಸಾರಾಯಿ ನಿಷೇಧ ಮಾಡಬೇಕೆಂಬುದು ರಾಜಾಜ್ಞೆಯ ಪತ್ರ (3)
14. ಮನೆ ಮನೆಗಳಲ್ಲೂ ಹಚ್ಚಿರುವ ದೀಪಗಳ ಹೊಳಪು (3)
15. ಬಂಧೂಕು ಧಾರಿಯಂತೆ ನಿಂತು ಒದಗಿಸಿದ ರಕ್ಷಣೆ (3)
16. ಹೋರಾಟ ಮಾಡಿ ಗಳಿಸಿದ್ದನ್ನೆಲ್ಲ ಅಲ್ಲೇ ಬಿಟ್ಟುಹೋಗುವುದೇ ? (3)

## 08-6-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ಸಮೇತ 3. ಪ್ರಸಾದ 4. ಗಾವಿಲ 6. ಅನುರಕ್ತಿ 7. ಕತೆಗಾರ 9. ತಡಸಲು 11. ಸಂಕೋಚನ 15. ವರ್ಣಿಸು 16. ರಸಾಲ 17. ಡಿಮಹ ( ಮಹಡಿ ಹಿಂದು ಮುಂದು )

ಮೇಲಿಂದ ಕೆಳಕ್ಕೆ :

1. ಸದರ 2. ತಗಾದೆ 3. ಪ್ರಹಾರ 5. ಲಬ್ಧತೆ 6. ಅಮೃತ 8. ರಸನ 10. ಸದ್ಭಾವ 12. ಕೋಮಲ 13. ಮುಸುಡಿ 14. ಪರಮ

# ಪ್ರಶ್ನಾಂಕಣ

## ಚಿರತೆ -ಜಾಗ್ವಾರ್ : ಏನೇನು ಅಂತರ ?

ಚಿರತೆ ( ಲೆಪರ್ಡ್ ) ಮತ್ತು ಜಾಗ್ವಾರ್ ಇವೆರಡೂ 'ದೊಡ್ಡಬೆಕ್ಕು' ಗಳ ಗುಂಪಿಗೇ ಸೇರಿವೆ ; ನೋಡಿದೊಡನೆ ಮೇಲ್ನೋಟಕ್ಕೆ ಸರಿಸುಮಾರು ಒಂದೇ ರೀತಿ ಕಾಣುತ್ತವೆ . ಆದರೆ ಎರಡೂ ವಿಧ ಬೆಕ್ಕುಗಳ ನಡುವಣ ಅಂತರಗಳು ಹಲವಾರು. ಪ್ರಮುಖವಾದ ವ್ಯತ್ಯಾಸಗಳು ಇವು :


* ಜಾಗ್ವಾರ್ ಗಳದು ( ಚಿತ್ರ 3 ) ಪ್ರಸ್ತುತ ಬಹು ಸೀಮಿತ ವಾಸಕ್ಷೇತ್ರ. ಅವುಗಳ ವಾಸ್ತವ್ಯ ದಕ್ಷಿಣ ಅಮೆರಿಕದ ಅಮೆಜ಼ಾನಿಯಾ ವೃಷ್ಟಿ ವನ ಪ್ರದೇಶಕ್ಕಷ್ಟೇ ಸೀಮಿತ. ಆದರೆ ಚಿರತೆಗಳದು ( ಚಿತ್ರ 1, 2 ) ಆಫ್ರಿಕ ಮತ್ತು ಭಾರತವೂ ಸೇರಿದಂತೆ ಏಷಿಯದ ಬಹುಪಾಲು ಎಲ್ಲ ಪ್ರದೇಶಗಳಿಗೂ ಹರಡಿದ ವಿಸ್ತಾರ ನೆಲೆ.

* ಭಾರೀ ಬೆಕ್ಕುಗಳಲ್ಲೆಲ್ಲ ಗಾತ್ರದಲ್ಲಿ ಜಾಗ್ವಾರ್ ಗಳದು ಹುಲಿ, ಸಿಂಹ ಗಳ ನಂತರದ ತೃತೀಯ ಸ್ಥಾನ ; ಚಿರತೆಗಳದು ನಾಲ್ಕನೆಯ ಸ್ಥಾನ. ಜಾಗ್ವಾರ್ ಗಳದು ಚಿರತೆಗಳಿಗಿಂತ ಅಗಲವಾದ ಮುಖ, ತಲೆ ; ಹೆಚ್ಚು ದಷ್ಟಪುಷ್ಟ , ಬಲಿಷ್ಠ ಶರೀರ.

* ಜಾಗ್ವಾರ್ ಮತ್ತು ಚಿರತೆ ಎರಡರದೂ ಮೇಲ್ನೋಟಕ್ಕೆ ಸ್ಥೂಲವಾಗಿ ಏಕರೂಪದ ಚರ್ಮ ಚಿತ್ತಾರ. ಆದರೆ, ಸೂಕ್ಷ್ಮವಾಗಿ ಗಮನಿಸಿದರೆ ಜಾಗ್ವಾರ್ ಚರ್ಮದ ಮಚ್ಚೆಗಳದು ಅಧಿಕ ವಿಸ್ತಾರ ; ಜೊತೆಗೆ, ಮಚ್ಚೆಗಳೊಳಗೆ ಚುಕ್ಕಿ ಚುಕ್ಕಿಗಳ ಸಿಂಗಾರ.

* ಜಾಗ್ವಾರ್ ಗಳ ದವಡೆಗಳು ಚಿರತೆ ದವಡೆಗಳಿಗಿಂತ ಹೆಚ್ಚು ಬಲಿಷ್ಠ ; ಕೋರೆಹಲ್ಲುಗಳು ವಿಪರೀತ ಹರಿತ. ಜಾಗ್ವಾರ್ ಗಳು ತಾವು ಹಿಡಿವ ಬಲಿ ಪ್ರಾಣಿಗಳ ತಲೆಯನ್ನೇ ಕಚ್ಚಿ ಹಿಡಿದು, ತಲೆಬುರುಡೆಯನ್ನು ಮುರಿಯುತ್ತವೆ ! ಚಿರತೆಗಳು ಹಾಗಲ್ಲ ; ಅವು ಬಲಿಯ ಕೊರಳಿಗೆ ಬಾಯಿ ಹಾಕಿ, ಕಚ್ಚಿ ಹಿಡಿದು, ಉಸಿರುಗಟ್ಟಿ ಸಾಯಿಸುತ್ತವೆ.

* ಜಾಗ್ವಾರ್ ಗಳ ವಾಸ ನದೀ ತೀರಗಳ ಆಸುಪಾಸುಗಳಲ್ಲೇ ಅತ್ಯಂತ




ಸಾಮಾನ್ಯ. ನೀರಿಗಿಳಿದು ಈಜಾಡುವುದು, ಜಲಚರಗಳನ್ನು ಬೇಟೆಯಾಡುವುದು ಅವಕ್ಕೆ ತುಂಬ ಪ್ರಿಯ. ಅವು ಮರಗಳನ್ನೇರುವುದು ಬಹಳ ಅಪರೂಪ. ತದ್ವಿರುದ್ಧವಾಗಿ, ಚಿರತೆಗಳು ಈಜಬಲ್ಲವಾದರೂ ಅವು ನೀರಿನಿಂದ ದೂರ ; ಎಂಥ ಮಹಾ ವೃಕ್ಷಗಳನ್ನೂ ಅವು ಅತ್ಯಂತ ಸರಾಗವಾಗಿ ಹತ್ತುತ್ತವೆ, ಇಳಿಯುತ್ತವೆ. ತಾವು ಬೇಟೆಯಾಡಿದ ಭಾರೀ ಪ್ರಾಣಿಗಳನ್ನೂ ಕಚ್ಚಿ ಹಿಡಿದು ಅವು ಮರ ಏರುತ್ತವೆ ; ಮರಗಳ ಮೇಲೇ ವಿಶ್ರಮಿಸುತ್ತವೆ ; ಅಲ್ಲಿಂದಲೇ ಬೇಟೆಗೆ ಹೊಂಚು ಹಾಕುತ್ತವೆ ಕೂಡ.

* ಜಾಗ್ವಾರ್ ಗಳ ಧೈರ್ಯ ವಿಪರೀತ. ಎಷ್ಟೆಂದರೆ, ಅವುಗಳ ವಾಸಕ್ಷೇತ್ರದಲ್ಲೇ ಇರುವ ಅನಕೊಂಡಾ ಸರ್ಪ, ಕೇಮ್ಯಾನ್ ಮೊಸಳೆಗಳಂತಹ ಭಾರೀ ಗಾತ್ರದ, ಮಹಾನ್ ಶಕ್ತಿಯ ಬೇಟೆಗಾರರನ್ನೂ ಅವು ಮುಖಾಮುಖಿ ನಿಂತು ಎದುರಿಸುತ್ತವೆ ; ಸೆಣಸುತ್ತವೆ ; ಕೊಂದು ತಿಂದು ಹಾಕುತ್ತವೆ ! ತದ್ವಿರುದ್ಧವಾಗಿ, ಚಿರತೆಗಳು ಗುಟ್ಟಾಗಿ ಅಡಗಿ ಕುಳಿತು, ಅನಿರೀಕ್ಷಿತ ದಾಳಿ ನಡೆಸಿ, ನಿರಪಾಯಕರ ಪ್ರಾಣಿಗಳನ್ನಷ್ಟೇ ಬೇಟೆಯಾಡುತ್ತವೆ. ಹುಲಿ, ಸಿಂಹ, ಕಿರುಬ , ಆನೆಗಳು ಕಂಡೊಡನೆ ಸದ್ದಿಲ್ಲದೆ ಕಾಲು ಕೀಳುತ್ತವೆ !

■ ಎನ್. ವಾಸುದೇವ್